ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಮಾಹಿತಿ ಪ್ರಕಾರ 1974 ರೊಳಗೆ ಮುಗಿಸಬೇಕೆಂದು ಅಂದಾಜಾಗಿದೆ; of course, subject to the availability of funds.

ಶ್ರೀ ಬಿ. ಇ. ರಾಮಯ್ಯ.—ಇನ್ನಾದರೂ 1974ರೊಳಗೆ ಮುಗಿಸುತ್ತೀರಾ ಹೇಗೆ? ಏಕೆಂದರೆ ಇದು ಬಹಳ ಅವಶ್ಯವಾಗಿ ಬೇಕಾಗಿರುವಂತಹ ರೋಡು.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಸ್ಪಿಲ್ ಓವರ್ ವರ್ಕಿಗೆ 29 ಲಕ್ಷದ 79 ಸಾವಿರ ರೂಪಾಯಿ ಬೇಕಾಗುತ್ತದೆ. ಈ ಹಣವನ್ನು 1974ರೊಳಗೆ ಖರ್ಚು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ಮೊದಲೇ ಹೇಳಿದ ಹಾಗೆ Subject to the availability of funds.

Expenditure per acre under M. I. Schemes

195. Sri B. BYRAPPAJI (Turuvekere).—

Will the Minister for Public Works and Electricity be pleased to state :—

(*a*) the amount of expenditure fixed per acre under Minor Irrigation Scheme ;

(*b*) the year in which it was fixed ;

(*c*) the basis on which it was fixed ;

(*d*) whether it has come to their notice that due to the amount fixed being less difficulty has been experienced in obtaining sanction to the several estimates prepared ;

(*e*) if so, whether they have taken any action to reconsider and increase the amount fixed ?

Sri H. M. CHANNABASAPPA (Minister for Public Works and Electricity).—

(*a*) The amount fixed as per G. O. No. PWD 73 IIB 66, dated 4/10th September 1968 is as follows :

	Per acre	
	In an area of 24″ and more than 24″ of average rainfall.	In an area of 24″ and less than 24″ of rainfall.
	Rs.	Rs.
(i) Irrigation works with 100 and less than 100 acres of achkat ...	1,250	1,500
(ii) Irrigation works with more than 100 acres of achkat ...	1,250	1,500
(iii) Restoration of tanks ...	1,000	1,000

(SRI H. M. CHANNABASAPPA)

(*b*) In 1968.

(*c*) The above rates have been fixed taking into account the amount of expenditure incurred by Government in the construction and restoration of tanks.

(*d*) Yes.

(*e*) This is under the consideration of the Government.

ಶ್ರೀ ಬಿ. ಬೈರಪ್ಪಾಜಿ.—ತಾವು 1968ನೇ ಇಸವಿಯಲ್ಲಿ ನಿಗದಿ ಮಾಡಿದಂತಹ ಎಕರೆವಾರು ಖರ್ಚಿನ ಬಗ್ಗೆ ತಿಳಿಸಿದ್ದೀರಿ. ಹಿಂದಿನ ಕೆರೆಯ ಕೆಲಸದ 'ಡ್ಯೂಲ್ ಆಫ್ ರೇಟಿಗೂ, ಇವತ್ತಿನ ಡ್ಯೂಲ್ ಆಫ್ ರೇಟಿಗೂ ಅಜಗಜಾಂತರ ವ್ಯತ್ಯಾಸ ಇದೆ. ಇವತ್ತು ಕೆರೆಗಳ ಕೆಲಸದ ಖರ್ಚು ಜಾಸ್ತಿಯಾಗಿ ಹೋಗುತ್ತಾ ಇದೆ. ಇದರಿಂದ ನೂರಾರು ಮೈನರ್ ಇರಿಗೇಷನ್ ಪ್ರೊಜೆಕ್ಟುಗಳು ಕಾರ್ಯಗತವಾಗುವುದಕ್ಕೆ ತೊಂದರೆಯಾಗಿದೆ. ಇದನ್ನು ಮತ್ತೆ ಪರಿಶೀಲನೆ ಮಾಡಿ ಒಂದಕ್ಕೆ ಎರಡರಷ್ಟು ಅದರೂ ಹೆಚ್ಚುಮಾಡಿ ಕೆಲಸ ಆಗದೆ ಇರತಕ್ಕಂತಹ ಕಾಮಗಾರಿಗಳನ್ನು ಪೂರ್ಣ ಮಾಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ನಿಗದಿ ಮಾಡಿರತಕ್ಕಂತಹ ಪೆಚ್ಚನ್ನು ಬದಲಾಯಿಸ ಬೇಕೆಂದು ಸಲಹೆ ಮಾಡಿದ್ದೀರಿ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಎಷ್ಟು ಮಾಡಬೇಕೆಂಬುದರ ಬಗ್ಗೆ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಮಾಡಬೇಕಾಗುತ್ತದೆ. ಸರ್ಕಾರದವರು ಹಣ ಖರ್ಚುಮಾಡಿದಾಗ ಸ್ವಲ್ಪವಾದರೂ ಪ್ರತಿಫಲ ಬರಬೇಕೆಂಬುದನ್ನು ದೃಷ್ಟಿಯಲ್ಲಿಟ್ಟು ಕೊಂಡು ಮತ್ತು ಈಗ ಬದಲಾವಣೆಯಾದಂತಹ ಷೆಡ್ಯೂಲ್ ಆಫ್ ರೇಟನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಬೇಕಾಗುತ್ತದೆ. ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಷ್ಟು ಪ್ರಪೋರ್ಷನ್‌ನಲ್ಲಿ ಹೆಚ್ಚು ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಇದನ್ನು ತ್ವರಿತವಾಗಿ ಮಾಡದಿದ್ದರೆ ಬಹಳ ತೊಂದರೆಯಿದೆ. ನಮ್ಮ ಕ್ಷೇತ್ರದಲ್ಲಿ 20-30 ಕೆರೆಗಳ ಕೆಲಸವನ್ನು ಮಾಡದೆ ಇರಾಖೆಯವರು ನಿಲ್ಲಿಸಿದ್ದಾರೆ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರ ಅವಶ್ಯಕತೆ ಇದೆಯೆಂಬುದನ್ನು ಸರ್ಕಾರದವರು ಒಪ್ಪಿ ಕೊಳ್ಳುತ್ತಾರೆ. ಇದರ ಬಗ್ಗೆ ತ್ವರಿತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಆಗಲೇ ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—68 ರಲ್ಲಿ ಷೆಡ್ಯೂಲ್ ಆಫ್ ರೇಟ್ ಏನಿತ್ತು, ಅದನ್ನು ಈಗಿನ ಮಟ್ಟಕ್ಕೆ ಯಾವ ಪ್ರಮಾಣದಲ್ಲಿ ಏರಿಸಿದ್ದೀರಿ; ಮತ್ತು ಏರಿಸಿ ನಿಗದಿಯಾಗಿರ ತಕ್ಕಂತಹ ಹಣವನ್ನೂ ಹೆಚ್ಚಿಸಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತತ್ಪಶಃ ತಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ; ಆದರೆ ವಿವರಗಳನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಎಷ್ಟು ಹೆಚ್ಚು ಮಾಡಬೇಕು, ಎಷ್ಟು ತೀವ್ರತೆಯಿಂದ ಮಾಡಬೇಕೆಂಬುದನ್ನು ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ದರದಲ್ಲಿ ತೂಬು-ಕೋಡಿ ಇತ್ಯಾದಿಗಳ ರಿಪೇರಿ ಮಾಡುವ ಸಂದರ್ಭ ಇದ್ದರೆ, ಅದನ್ನು ಕೂಡ ಇದರಲ್ಲಿ ಸೇರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವುಗಳು ಅಂದರೆ ಸ್ಲುಯಿಸ್ ಕೆಟ್ಟುಹೋಗತಕ್ಕದ್ದು ಇತ್ಯಾದಿ ಇಂಪ್ರೂವ್‌ಮೆಂಟಿನಲ್ಲಿ ಬರುತ್ತದೆ. ಎಸ್ಟಿಮೇಟಿನಲ್ಲಿ ಬರುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆರೆಗೆ ಎಸ್ಟಿಮೇಟ್ ಆಗಿ ಎಕ ನಾಮಿಕಲಿ ಇನ್‌ಫೀಸಿಬಲ್ ಎಂದು ಸರ್ಕಾರದವರು ಹೇಳಿವ್ವಾರೆ. ಆದ್ದರಿಂದ ಅದನ್ನು ರಿವೈಸ್ ಮಾಡಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆ ಕಟ್ಟಿಸುವ ದೃಷ್ಟಿಯಿಂದ ಇದನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಸರ್ಕಾರದವರು ಎಷ್ಟುಮಟ್ಟಿಗೆ ಯಾವ ಪ್ರಮಾಣದಲ್ಲಿ ರಿಪೈಸ್ ಮಾಡುತ್ತಾರೆಂಬುದು ಈಗಿರುವ ಪ್ರಶ್ನೆ. ಅದು ದೇಶದ ಹಿತದೃಷ್ಟಿಯಿಂದ ಸರಿ ಎಂದರೆ ಅದನ್ನು ರಿಪೈಸ್ ಮಾಡುತ್ತೇವೆ. ಆ ರೀತಿ ಅದರೊಳಗೆ ಇದು ಬಂದರೆ ಮಾಡಬಹುದು.

ಶ್ರೀ ಬಿ. ಬೈರಪ್ಪಾಜಿ.—ನರಾನರಿ 21 ಅಂಗುಲಕ್ಕಿಂತ ಕಡಿಮೆ ಮಳೆ ಬರತಕ್ಕಂತಹ ಪ್ರದೇಶದಲ್ಲಿ ಈ ರೇಟನ್ನು ಹೆಚ್ಚು ಪರಿಣಾಮಕಾರಿಯಾಗಿ ಕ್ಷೀಪ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಒಪ್ಪಿಕೊಂಡಿದ್ದೇನೆ. ಒಪ್ಪಿಕೊಂಡಿರುವವನನ್ನು ಇನ್ನೂ ಬಿಡದೆ ಹೋದರೆ ಏನು ಮಾಡುವುದು. ತತ್ವಶಃ ನಾನು ಒಪ್ಪಿಕೊಂಡಿದ್ದೇನೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಆಗಲೇ ಹೇಳಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾರಾದರೂ ವಿರೋಧಪಕ್ಷದ ಸದಸ್ಯರು ಕೇಳಿದರೆ ಅವರು ವಿರೋಧಪಕ್ಷದವರು ಎಂದು ಅವರ ಕ್ಷೇತ್ರದಲ್ಲಿರತಕ್ಕ ಕೆರೆಗಳನ್ನು ಕಟ್ಟಿಸುವ ಕಾಮಗಾರಿಗಳನ್ನು ಬಿಟ್ಟು ಬೇರೆ ಕಡೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆಗಳಿಗೆ ಪಕ್ಷಪಾತವಿಲ್ಲ. ನಮಗೂ ನಿಮಗೂ ಇರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಪರಮಾವಧಿಯನ್ನು ಎಲ್ಲಾ ನೀರಾವರಿಗಳಿಗೂ ಅನ್ವಯಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಏನಿವೆಯೋ ಅವುಗಳನ್ನು ಪರಿಶೀಲನೆ ಮಾಡುವಾಗ ಬೇರೆ ಬೇರೆ ಅಂಶಗಳನ್ನೂ ಸಹ ಗಮನವಲ್ಲಿಟ್ಟುಕೊಂಡು ಮಾಡುತ್ತೇವೆ. ಸಣ್ಣಪುಟ್ಟ ನೀರಾವರಿ ಯೋಜನೆಗಳಿಗೂ ಪೂರ್ಣ ಗಮನವನ್ನು ಕೊಡುತ್ತೇವೆ.

Houses Constructed and Allotted to Employees By M.I.S.L.

263. Sri ABDUL KHUDUS ANWAR (Bhadravathi).—

Will the Minister for Industries be pleased to state:—

(*a*) the percentage of the houses allotted to the employees of Mysore Iron and Steel Limited at Bhadravathi ;

(*b*) the number of houses constructed during the last four years ;

(*c*) the maintenance cost of these houses like white washing, finishing (separate figures for bungalows and G. type quarters and other categories H.K.C. Type quarters may be furnished) ;

(*d*) the amount spent for furnishing and air conditioning the quarters of Director of Finance ?

Sri S. M. KRISHNA (Minister for Industries).—

(*a*) 93.5 per cent.

(*b*) During 1968—

(1) 12 blocks of 8 units storeyed workmen cottages.

(2) 4 blocks of 4 units H type quarters.

(3) 5 G. Type quarters.